ನೆಲದ ತುಂಬಾ ಚರಿತ್ರೆಯನ್ನೇ ಹಾಸುಹೊದ್ದಿರುವ ಪುಟ್ಟ ದೇಶ ಬಲ್ಗೇರಿಯಾ. ಈ ಊರಿನ ಮಣ್ಣಿನಾಳದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಹಲವು ರಾಜವಂಶಸ್ಥರ ವೈಭವ, ಕಲೆ–ಸಂಸ್ಕೃತಿಯ ಕಥನಗಳಿವೆ. ಪ್ರಕೃತಿ ಜೊತೆಜೊತೆಗೆ ಸಹಬಾಳ್ವೆಯಿಂದ ಬದುಕಿದ ನಾಗರಿಕತೆಯ ಹೆಜ್ಜೆಗುರುತುಗಳೂ ಕಾಣುತ್ತವೆ.

■ ಡಾ. ಪ್ರೇಮಲತ ಬಿ.





**ಕಣ ಕಣದಲ್ಲೂ ಚರಿತ್ರೆ**

# ಪುಟ್ಟ ದೇಶ ಬಲ್ಗೇರಿಯಾದ ದೊಡ್ಡ ಇತಿಹಾಸದ ಕಥನ

ಬಾಲ್ಕನ್ ಪರ್ವತಶ್ರೇಣಿಗಳಿಂದ ಸುತ್ತುವರೆದ ಬಲ್ಗೇರಿಯಾ ಪ್ರವಾಸ ಕೈಗೊಂಡಾಗ ಅಲ್ಲಿ ಬಹಳಷ್ಟು ಚಾರಿತ್ರಿಕ ಮತ್ತು ಪ್ರೇಕ್ಷಣೀಯ ಸ್ಥಳಗಳಿವೆಯೆಂಬ ಕಲ್ಪನೆಯೂ ನಮಗಿರಲಿಲ್ಲ. ಅಷ್ಟೇ ಏಕೆ, ಅಲೆಮಾರಿಗಳಾಗಿದ್ದ ಆದಿಮಾನವರು ಒಂದೆಡೆ ನೆಲೆಯೂರಿ ಸಂಘಜೀವನ ನಡೆಸಲು ಮೊಟ್ಟಮೊದಲು ಆರಿಸಿಕೊಂಡ ಜಾಗಗಳಲ್ಲಿ ಬಲ್ಗೇರಿಯಾ ಒಂದೆಂದರೆ ಅಚ್ಚರಿಯಾಗುತ್ತದೆ. ಇದಕ್ಕೆ ಕಾರಣವೇನಿರಬಹುದೆಂಬ ಪ್ರಶ್ನೆಯೂ ಮೂಡುತ್ತದೆ.

ಬಲ್ಗೇರಿಯಾ, ಆಲ್ಬೇನಿಯಾ, ಕ್ರೊಯೇಷಿಯಾ, ಕೊಸೊವೊ, ಮಾಂಟೆನಿಗ್ರೊ, ಮಸೆಡೋನಿಯಾ, ರೊಮೇನಿಯಾ, ಸರ್ಬಿಯಾ, ಸ್ಲೊವೇನಿಯಾ, ಬೋಸ್ನಿಯಾ ಮತ್ತು ಹೆರ್ಝೆಗೋವಿನ ಪ್ರದೇಶಗಳ ಸುತ್ತಲೂ ಬಾಲ್ಕನ್ ಪರ್ವತಶ್ರೇಣಿಗಳು ಹಬ್ಬಿರುವ ಕಾರಣ ಇವುಗಳನ್ನು 'ಬಾಲ್ಕನ್ ಪರ್ಯಾಯ ದ್ವೀಪಖಂಡ'ವೆಂದು ಕರೆಯುತ್ತಾರೆ. ಇವುಗಳಲ್ಲಿ ಬಲ್ಗೇರಿಯಾ, ಪೂರ್ವ ಯೂರೋಪಿನ ಪೂರ್ವಾಂಚಿನಲ್ಲಿ ಬರುತ್ತದೆ. ಬಲ್ಗೇರಿಯಾ ಸಂಸ್ಕೃತಿಯಲ್ಲಿ ಯೂರೋಪ್, ಮಧ್ಯಪ್ರಾಚ್ಯ ಮತ್ತು ಏಷ್ಯಾ ಖಂಡಗಳ ಪ್ರಭಾವ ದಟ್ಟವಾಗಿರುವುದನ್ನು ನೋಡಬಹುದಾಗಿದೆ.

ಬಲ್ಗೇರಿಯಾ ರಾಜಧಾನಿ, ಸೋಫಿಯಾ ನಗರ. ನಂತರದ ದೊಡ್ಡ ನಗರ, ಪ್ಲಾವ್ಡಿವ್. ಈಗೀಗ ಭಾರತದಿಂದ ಇಲ್ಲಿಗೆ ಹೋಗುವ ಪ್ರವಾಸಿಗರ ಸಂಖ್ಯೆ ಬೆಳೆಯುತ್ತಿದೆ.

ಹಿಂದೆ ಈ ಬಾಲ್ಕನ್ ದೇಶಗಳು ಹಿಟ್ಲರ್‌ನ ಕ್ರೌರ್ಯದಿಂದ ನಲುಗಿದ ಪ್ರದೇಶಗಳು. ಆಗ ಬಲ್ಗೇರಿಯಾಗೆ ನೆರವು ನೀಡಿದ್ದು ಸೋವಿಯತ್ ಒಕ್ಕೂಟದ ರಷ್ಯಾ. ಇದೀಗ ಬಲ್ಗೇರಿಯಾ ಸ್ವತಂತ್ರ ದೇಶ. ಇಂದಿಗೂ ಇಲ್ಲಿ ಹಳೆಯ ತಲೆಮಾರಿನವರು ರಷ್ಯಾ ಮಾಡಿದ ಉಪಕಾರ ನೆನೆಯುತ್ತಾರೆ. ಪ್ಲಾವ್ಡಿವ್ ನಗರದ ಬೆಟ್ಟವೊಂದರ ಮೇಲೆ ಸೋವಿಯತ್ ಸೈನಿಕನೊಬ್ಬನ ದೊಡ್ಡ ಶಿಲೆ ಕೆತ್ತಿ ನಿಲ್ಲಿಸಿ, ರಷ್ಯನ್ನರ ಉಪಕಾರವನ್ನು ಶಾಶ್ವತವಾಗಿ ನೆನಪಿನಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಅದಕ್ಕೂ ಹಿಂದೆ, ಇದು ರೋಮನ್ನರ ಆಳ್ವಿಕೆಗೆ ಒಳಪಟ್ಟಿತ್ತು. ಹಾಗಾಗಿ ಇಲ್ಲಿ ರೋಮನ್ನರ ಕಟ್ಟಡಗಳು, ಸ್ನಾನಗೃಹಗಳು, ರಂಗಮಂದಿರಗಳು, ಇನ್ನಿತರ ಅವಶೇಷಗಳು ಬಹಳಷ್ಟಿವೆ. ಗ್ರೀಕರು, ಒಟ್ಟೊಮಾನ್ ದೊರೆಗಳು ಮತ್ತು ರಷ್ಯನ್ನರು